# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1201 |
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 15.12.2023 |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ಫಾರಂ-9 ಮತ್ತು ಫಾರಂ-11 ಬಿ ಅರ್ಜಿಗಳು ವಿಲೇವಾರಿಯಾಗದೇ ಎಷ್ಟು ದಿನಗಳಿಂದ ಬಾಕಿ ಇವೆ; ಬಾಕಿ ಇರುವ ಅರ್ಜಿಗಳ ಸಂಖ್ಯೆ, ಸಮಯ ಮತ್ತು ಕಾಲಮಿತಿಯಲ್ಲಿ ಅರ್ಜಿಗಳನ್ನು ವಿಲೇವಾರಿ ಮಾಡದೇ ಬಾಕಿ ಉಳಿಸಿಕೊಂಡಿರುವುದಕ್ಕೆ ಸ್ಪಷ್ಟ ಕಾರಣಗಳೇನು; | ನಮೂನೆ 9 ಮತ್ತು 11ಬಿ ಅರ್ಜಿಗಳು ವಿಲೇವಾರಿಯಾಗದೆ ಬಾಕಿಯಿರುವ ಅರ್ಜಿಗಳ ಸಂಖ್ಯೆ: 51150, ಸಮಯದ ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ.<br><br>ಗ್ರಾಮಠಾಣಾ ಆಸ್ತಿಗಳಿಗೆ ಕಂದಾಯ ಇಲಾಖೆಯು ಸರ್ವೆ ಸ್ಕೆಚ್ ನೀಡುವಲ್ಲಿ ವಿಳಂಬವಾಗುತ್ತಿರುವುದರಿಂದ ವಿಲೇವಾರಿ ಬಾಕಿಯಿರುತ್ತದೆ. |
| (ಆ) | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ತಂತ್ರಜ್ಞಾನ ಬಳಸಿ ಸರ್ಕಾರ ಕೈಗೊಂಡಿರುವ ಇ-ಸ್ವತ್ತು ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗುತ್ತಿರುವುದರಿಂದ ಆಸ್ತಿ ಮಾಲೀಕರು ದಾಖಲೆ ಪತ್ರ ಪಡೆಯಲು ಅಲೆದಾಡುತ್ತಿರುವ ಸ್ಥಿತಿ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಗ್ರಾಮ ಪಂಚಾಯತಿಗಳಲ್ಲಿ ಇ-ಸ್ವತ್ತು ತಂತ್ರಾಂಶದ ಮೂಲಕ ಸ್ವೀಕೃತವಾಗುವ ಅರ್ಜಿಗಳಿಗೆ ಸಂಬಂಧಿಸಿದಂತೆ 30 ದಿನಗಳ ನೋಟಿಸ್ ಜಾರಿಗೊಳಿಸಿ ತದನಂತರ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯ ಅನುಮೋದನೆಯೊಂದಿಗೆ 45 ದಿನಗಳ ಅವಧಿಯಲ್ಲಿ ಇ-ಸ್ವತ್ತು ನಮೂನೆ ನೀಡಲು ಅವಕಾಶ ಕಲ್ಪಿಸಲಾಗಿದೆ.<br><br>ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಆಸ್ತಿ ಮಾಲೀಕರು ಸೂಕ್ತ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆಗಳನ್ನು ಕಾಲಮಿತಿಯೊಳಗೆ ಪಡೆಯಲು ಅವಕಾಶವಿರುತ್ತದೆ. |
| (ಇ) | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳ ಖರೀದಿ, ಪಾಲು ಹಾಗೂ ಬ್ಯಾಂಕ್ ಸಾಲಗಳಿಗೆ ಇ-ಸ್ವತ್ತು ತಂತ್ರಾಂಶ ಬಳಸಿ ಆನ್‌ಲೈನ್ ಮೂಲಕ ವಿತರಿಸುವ ಫಾರಂ-9 ಮತ್ತು ಫಾರಂ-11ಗಳು ಕಡ್ಡಾಯವಾಗಿರುವುದರಿಂದ ಜನರಿಗೆ ಇ-ಸ್ವತ್ತು ಸಿಗದೇ ಕಛೇರಿಯಿಂದ ಕಛೇರಿಗೆ ಅಲೆದಾಡುವ ಸ್ಥಿತಿ ನಿರ್ಮಾಣವಾಗಿರುವುದರಿಂದ ಗ್ರಾಮಾಂತರ ಪ್ರದೇಶದ ಜನರಿಗೆ ತೊಂದರೆ ನೀಡಿದಂತೆ ಆಗುವುದಿಲ್ಲವೇ; | |

| | | |
|---|---|---|
| (ಈ) | ಅರ್ಜಿದಾರರು ಭೂ ದಾಖಲೆಗಳನ್ನು ಕಾಲಮಿತಿಯಲ್ಲಿ ಪಡೆಯುವ ಹಾಗೆ ಇ-ಸ್ವತ್ತು ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಇನ್ನಷ್ಟು ಸರಳೀಕರಣ ಮಾಡುವಲ್ಲಿ ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿದೆ? | ಇ-ಸ್ವತ್ತು ನಮೂನೆಗೆ ಸಲ್ಲಿಸಲಾಗುವ ಅರ್ಜಿಗಳನ್ನು ಸಕಾಲ ಅಧಿನಿಯಮದ ವ್ಯಾಪ್ತಿಗೆ ಒಳಪಡಿಸಿ ಕಾಲಮಿತಿಯೊಳಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆಗಳನ್ನು ನೀಡಲು ಕ್ರಮ ಕೈಗೊಳ್ಳಲಾಗಿರುತ್ತದೆ. |

ಸಂಖ್ಯೆ: ಗ್ರಾಅಪ 645 ಗ್ರಾಪಂಅ 2023

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ(ವಿಧಾನಸಭೆಯಿಂದ ಚುನಾಯಿತರಾದವರು), ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1201 ಕ್ಕೆ ಅನುಬಂಧ

ಇ-ಸ್ವತ್ತು ಯೋಜನೆಯ ಅನುಷ್ಠಾನದಲ್ಲಿ ವಿಳಂಬವಾಗುತ್ತಿರುವ ಕುರಿತು.

| ಕ್ರ. ಸಂ | ಜಿಲ್ಲೆಯ ಹೆಸರು | ಪ್ರಸ್ತುತ ಜಿಲ್ಲೆಯಲ್ಲಿ ಸ್ವೀಕೃತವಾಗಿರುವ ಫಾರಂ-9 ಮತ್ತು ಫಾರಂ-11ಬಿ ಗಳ ಅರ್ಜಿಗಳ ಒಟ್ಟು ಸಂಖ್ಯೆ | 0-45 ದಿನದೊಳಗೆ ವಿಲೇವಾರಿ ಆಗದೆ ಇರುವ ಅರ್ಜಿಗಳ ಸಂಖ್ಯೆ | 45 ದಿನಗಳ ಮೇಲ್ಪಟ್ಟು ವಿಲೇವಾರಿ ಆಗದೆ ಇರುವ ಅರ್ಜಿಗಳ ಸಂಖ್ಯೆ | ವಿಲೇವಾರಿ ಮಾಡಬೇಕಾದ ಒಟ್ಟು ಅರ್ಜಿಗಳು | [illegible] ಕಾಲಮಿತಿಯಲ್ಲಿ ಅರ್ಜಿಗಳನ್ನು ವಿಲೇವಾರಿ ಮಾಡದೆ ಬಾಕಿ ಉಳಿಸಿಕೊಂಡಿರುವುದಕ್ಕೆ ಸ್ಪಷ್ಟ ಕಾರಣಗಳು |
|---|---|---|---|---|---|---|
| 1 | 2 | 3 | 4 | 5 | (4+5) 6 | 7 |
| 1 | ಬೀದರ್ | 88510 | 456 | 902 | 1358 | ಗ್ರಾಮ ಠಾಣಾ ಆಸ್ತಿಗಳಿಗೆ ಕಂದಾಯ ಇಲಾಖೆಯ ಸರ್ವೆ ಸ್ಕೆಚ್ ನೀಡುವಲ್ಲಿ ವಿಳಂಬವಾಗುತ್ತಿರುವುದರಿಂದ, ಸೂಕ್ತ ದಾಖಲೆಗಳನ್ನು ಸಲ್ಲಿಸದೆ ಇರುವುದರಿಂದ ವಿಲೇವಾರಿ ಬಾಕಿ ಇರುತ್ತದೆ. |
| 2 | ಚಾಮರಾಜನಗರ | 74654 | 338 | 725 | 1063 | |
| 3 | ಧಾರವಾಡ | 65526 | 305 | 629 | 934 | |
| 4 | ಕಲಬುರಗಿ | 129163 | 91 | 796 | 887 | |
| 5 | ಮೈಸೂರು | 270833 | 1253 | 1703 | 2956 | |
| 6 | ಶಿವಮೊಗ್ಗ | 111664 | 250 | 1100 | 1350 | |
| 7 | ವಿಜಯನಗರ | 58354 | 192 | 650 | 842 | |
| 8 | ಬಾಗಲಕೋಟೆ | 123592 | 256 | 910 | 1166 | |
| 9 | ಬೆಂಗಳೂರು | 378675 | 4332 | 5855 | 10187 | |
| 10 | ಬೆಂಗಳೂರು ಗ್ರಾಮಾಂತರ | 158135 | 751 | 1429 | 2180 | |
| 11 | ಬೆಳಗಾವಿ | 186893 | 478 | 2177 | 2655 | |
| 12 | ಹಾವೇರಿ | 83722 | 471 | 1574 | 2045 | |
| 13 | ಕೊಡಗು | 25693 | 53 | 230 | 283 | |
| 14 | ಕೋಲಾರ | 139611 | 815 | 2159 | 2974 | |
| 15 | ಕೊಪ್ಪಳ | 112836 | 25 | 23 | 48 | |
| 16 | ಚಿಕ್ಕಮಗಳೂರು | 83321 | 349 | 1039 | 1388 | |

| | | | | | | |
|---|---|---|---|---|---|---|
| 17 | ಚಿತ್ರದುರ್ಗ | 138773 | 485 | 974 | 1459 | |
| 18 | ದಕ್ಷಿಣ ಕನ್ನಡ | 202283 | 274 | 271 | 545 | |
| 19 | ದಾವಣಗೆರೆ | 99273 | 214 | 645 | 859 | |
| 20 | ಉಡುಪಿ | 139715 | 232 | 338 | 570 | |
| 21 | ಉತ್ತರ ಕನ್ನಡ | 35834 | 179 | 362 | 541 | |
| 22 | ಚಿಕ್ಕಬಳ್ಳಾಪುರ | 121188 | 869 | 1012 | 1881 | |
| 23 | ರಾಮನಗರ | 124175 | 1609 | 1264 | 2873 | |
| 24 | ಬಳ್ಳಾರಿ | 78831 | 352 | 313 | 665 | |
| 25 | ವಿಜಯಾಪುರ | 90014 | 403 | 1038 | 1441 | |
| 26 | ಗದಗ | 91106 | 194 | 704 | 898 | |
| 27 | ಹಾಸನ | 136612 | 549 | 1032 | 1581 | |
| 28 | ಮಂಡ್ಯ | 176568 | 711 | 470 | 1181 | |
| 29 | ರಾಯಚೂರು | 90086 | 135 | 1043 | 1178 | |
| 30 | ತುಮಕೂರು | 235388 | 827 | 2035 | 2862 | |
| 31 | ಯಾದಗಿರಿ | 53590 | 150 | 550 | 700 | |
| | **Total:** | 3904618 | 17598 | 33952 | 51550 | |

ನಿರ್ದೇಶಕರು (ಅಭಿವೃದ್ಧಿ)
ಕಂ.ಪಂ.ರಾಜ್ ಆಯುಕ್ತಾಲಯ